ಸಭಾಧ್ಯಕ್ಷರು: ಆಯಿತು, ಒಂದು ನಿಮಿಷ ನನ್ನ ಮಾತು ಪೂರ್ಣ ಕೇಳಿ, ತುರ್ತು ವಿಷಯವೆಂದು ನೀವು ಪ್ರಸ್ತಾಪ ಮಾಡಿದ್ದೀರಿ, ನಾನು ಪ್ರಸ್ತಾಪ ಮಾಡಲಿಕ್ಕೆ ನಿಮಗೆ ಅವಕಾಶ ಕೊಟ್ಟಿದ್ದೇನೆ. ಆದರೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಸರ್ಕಾರದಿಂದ ತಕ್ಷಣಕ್ಕೆ ಉತ್ತರವನ್ನು ನಿರೀಕ್ಷೆ ಮಾಡಲಿಕ್ಕೆ ಬರುವುದಿಲ್ಲ. ನೀವು ಅವರ ಗಮನಕ್ಕೆ ತಂದಿದ್ದೀರಿ, ನಾಳೆ ಮಾಹಿತಿ ಪಡೆದುಕೊಂಡು ನಿಮಗೆ ಉತ್ತರ ಕೊಡುವುದಾಗಿ ಹೇಳಿದ್ದಾರೆ, ನಾಳೆವರೆಗೆ wait ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ: ಇದನ್ನು ನಿಯಮ 69 ಕ್ಕೆ convert ಮಾಡಿ.

ಸಭಾಧ್ಯಕ್ಷರು: ಶೂನ್ಯ ವೇಳೆಯನ್ನು ನಿಯಮ 69ಕ್ಕೆ convert ಮಾಡಲಿಕ್ಕೆ ಬರುವುದಿಲ್ಲ. ನಾಳೆ ನೀವು ನೋಟೀಸ್ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ಇದು ಬಹಳ ಮುಖ್ಯವಾದುದು, ನಾಳೆ ಮೀಟಿಂಗ್ ಇದೆ. ದಯಮಾಡಿ ಇದಕ್ಕೆ ಸರಿಯಾಗಿ ಉತ್ತರವನ್ನು ಕೊಡಿಸಬೇಕು.

ಸಭಾಧ್ಯಕ್ಷರು: ನಾಳೆ ಅದಕ್ಕೆ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರಲ್ಲಾ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನಾಳೆ ಬೆಳಿಗ್ಗೆ ಉತ್ತರ ಕೊಡಲಿ ಬಿಡಿ, ಆಯಿತು.

ಶ್ರೀ ಸಿದ್ಧರಾಮಯ್ಯ: ನಾಳೆ ಬೆಳಿಗ್ಗೆ ಉತ್ತರ ಕೊಡಿ, ಏಕೆಂದರೆ ನಾಳೆ ಮೀಟಿಂಗ್ ಇದೆಯಂತೆ, ದುರುದ್ದೇಶದಿಂದ ಎಲ್ಲರನ್ನೂ ಒಂದೇ ದಿನದಲ್ಲಿ supercede ಮಾಡಿದ್ದಾರೆಂದು ಆರೋಪ ಮಾಡುತ್ತಿದ್ದಾರೆ. ಇವತ್ತು ಅವರು ನೋಟಿಸ್ ಕೊಟ್ಟಿದ್ದಾರೆಂದು ಹೇಳಿದರೆ ನಾಳೆ ಬೆಳಿಗ್ಗೆ ಅದಕ್ಕೆ ಉತ್ತರ ಕೊಡಲಿ.

ಸಭಾಧ್ಯಕ್ಷರು: ಆಯಿತು, ಈಗ ಶ್ರೀ ಕೃಷ್ಣಪ್ಪನವರು ಮಾತನಾಡಿ.

(ಗೊಂದಲ)

ಶ್ರೀ ಮಹದೇವಪ್ಪ: ಆಫೀಸ್ ಅನ್ನು ಶಿಫ್ಟ್ ಮಾಡಿದೆಯೆಂದು ಒಂದೇ ಮಾತಿಗೆ ಸೂಪರ್‌ಸೀಡ್ ಮಾಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಆಫೀಸ್ ಶಿಫ್ಟ್ ಆಗಿದೆಯೆ ಎಂದು ಅವರಿಗೆ ಕೇಳಿಕೊಂಡು ಹೇಳಬಹುದಲ್ಲವೇ?

ಸಭಾಧ್ಯಕ್ಷರು: ನಾಳೆ ಉತ್ತರ ಕೊಡುವುದಾಗಿ ಹೇಳಿದ್ದಾರೆ, ನಾಳೆವರೆಗೆ ಕಾಯಬೇಕು.

ಆ) ವಿಷಯ: ತುರುವೇಕೆರೆ ತಾಲ್ಲೂಕಿನ ಹುಲ್ಲೆಕೆರೆ ಹಾಸ್ಟೆಲ್‌ನಲ್ಲಿ ಮಹಿಳೆ ಮೇಲೆ ದೌರ್ಜನ್ಯ ಕುರಿತು–

ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ): ತುರುವೇಕೆರೆ ತಾಲ್ಲೂಕಿನಲ್ಲಿ ಹುಲ್ಲೆಕೆರೆ ಎಂಬ ಹಾಸ್ಟೆಲ್‌ನಲ್ಲಿ ಆ ಇಲಾಖೆಯ Assistant Director ಅಲ್ಲಿ ಅಡಿಗೆ ಮಾಡುವಂಥ ಹೆಣ್ಣುಮಗಳ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ್ದಾರೆ, ಆ ವಿಷಯ ಈ ಪತ್ರಿಕೆಯಲ್ಲಿ ಪಬ್ಲಿಷ್ ಆಗಿದೆ. ಕೂಡಲೇ ಈ ವಿಷಯದ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತಾಲ್ಲೂಕು ಮಟ್ಟದ E.O ಇಬ್ಬರೂ ಕೂಡಿ

enquiry ಮಾಡಿದ್ದಾರೆ. ಅದರ ಪೂರ್ಣ ಮಾಹಿತಿಯನ್ನು ತುಮಕೂರಿನ ಸಿ.ಇ.ಓ.ರವರಿಗೆ ಕಳುಹಿಸಿಕೊಟ್ಟಿದ್ದಾರೆ. ವಿಷಯವೇನೆಂದರೆ ಆತ ಆಕೆ ಮೇಲೆ ಬಹಳಷ್ಟು ದೌರ್ಜನ್ಯ ಮಾಡಿದ್ದಾರೆ. ಅಲ್ಲಿರುವಂಥ ಅಕ್ಕಪಕ್ಕದ ಶಿಕ್ಷಕರು ಹೋಗಿ ಆಕೆಯ ಗೌರವವನ್ನು ಕಾಪಾಡಿದ್ದಾರೆ. ಅದರ ಬಗ್ಗೆ ಈಗಾಗಲೇ ಮೂರು ವರದಿಯನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕೊಟ್ಟಿದ್ದಾರೆ, ಆದರೆ ಆ ಬಗ್ಗೆ ಯಾವುದೇ ಒಂದು ಕ್ರಮಕೈಗೊಂಡಿಲ್ಲ. ಆದರೆ ಸಿ.ಇ.ಓ.ರವರು ಅವರನ್ನು ವರ್ಗಾವಣೆ ಮಾಡುತ್ತೇವೆಂದು ಹೇಳುತ್ತಾರೆ. ಹಾಗಾದರೆ ಲೈಂಗಿಕ ಆರೋಪಕ್ಕೆ ಒಳಪಟ್ಟವರನ್ನೆಲ್ಲಾ ಕೇವಲ ವರ್ಗಾವಣೆ ಮಾಡಿಬಿಟ್ಟರೆ ಅವರಿಗೆ punishment ಆಗುವುದು ಯಾವಾಗ? ಈ ರಾಜ್ಯದ ಹೆಣ್ಣುಮಕ್ಕಳು ಕೆಲಸಕ್ಕೆ ಬರಬೇಕಾದರೆ, ಅವರ ಗೌರವ ಉಳಿಯಬೇಕಾದರೆ ಇಂಥ ಹಗರಣಗಳಿಗೆ ನಾವು ಕಡಿವಾಣವನ್ನು ಹಾಕಬೇಕಾಗುತ್ತದೆ. ಹಾಗಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ಪೂರ್ಣವಾಗಿ ತನಿಖೆ ಮಾಡಬೇಕೆಂದು ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಡಿ.ಸುಧಾಕರ್(ಮಾನ್ಯ ಸಮಾಜ ಕಲ್ಯಾಣ ಸಚಿವರು): ಕೂಡಲೇ ಆ ಸ್ಥಳಕ್ಕೆ ಜಂಟಿ ಕಾರ್ಯದರ್ಶಿಯವರನ್ನು ಕಳುಹಿಸಿ ಇವತ್ತೇ ವರದಿ ಕೊಡಲಿಕ್ಕೆ ಸೂಚನೆ ಕೊಟ್ಟಿದ್ದೇವೆ. ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸೂಚನೆ ಕೊಟ್ಟಿದ್ದೇವೆ. ವರದಿಯಾಧಾರದ ಮೇಲೆ ಮುಂದೆ ಅವರನ್ನು ಅಮಾನತ್ತಿನಲ್ಲಿಡಲು ಅಥವಾ ಸೂಕ್ತ ಕ್ರಮ ಕೈಗೊಳ್ಳಲಿಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ: ಅಧ್ಯಕ್ಷರೇ, ವರದಿ ಈಗಾಗಲೇ ಬಂದಿದೆ. The District Social Welfare Officer is a responsible Officer, ಅವರು Class-1 Senior ಆಗಿದ್ದಾರೆ. ಇದು ಬಹಳ ಗಂಭೀರವಾದ ವಿಷಯ. When they have given the enquiry report, further enquiry is not required. Suspension order ಮಾಡಿ further enquiry ಮಾಡಬಹುದು. Suspension is not a punihment totally. He can announce suspension immediately, further enquiry ಮಾಡಿ, we have no objection. We have already given the report. ಸುಮಾರು ಏಳು ದಿವಸಗಳಾಗಿವೆ, 9 ದಿವಸವಾಗುತ್ತಿದ್ದರೂ ಇನ್ನೂ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದರೆ ಏನರ್ಥ? ದಯಮಾಡಿ ಸಚಿವರು ತಕ್ಷಣ ಅವರಿಗೆ suspension order ಮಾಡಿ ಈ ಬಗ್ಗೆ immediate decision ತೆಗೆದುಕೊಳ್ಳಬೇಕು.

ಶ್ರೀ ಡಿ.ಸುಧಾಕರ್(ಮಾನ್ಯ ಸಮಾಜಕಲ್ಯಾಣ ಸಚಿವರು): ಜಂಟಿ ಕಾರ್ಯದರ್ಶಿಯವರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಅವರು ನೀಡುವ ವರದಿ ನೋಡಿ ನಾಳೆ ಬೆಳಿಗ್ಗೆ ಸಂಬಂಧಪಟ್ಟವರನ್ನು suspension ಮಾಡಲಿಕ್ಕೆ ಕ್ರಮಕೈಗೊಳ್ಳುತ್ತೇವೆ.